ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಭೀಮನ ಗುಡ್ಡದ ೧.೦೦ ಲಕ್ಷ ಗ್ಯಾಲನ್ ಸಾರ್ಮರ್ಥ್ಯ ಭೂಮಟ್ಟದ ಜಲಸಂಗ್ರಹಾಗಾರ ನಿರ್ಮಾಣ ಕೆಲಸ ಹೊರತುಪಡಿಸಿ ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡು ೧೯೯೩ರಲ್ಲಿ ಪುರಸಭೆಗೆ ನಿರ್ವಹಣೆಗೆ ಬಿಟ್ಟುಕೊಡಲಾಗಿದೆ.

ಆ) ಜುಲೈ ೧೯೯೫ ರವರೆಗೆ ರೂ. ೧೧೨.೯೮ ಲಕ್ಷಗಳು

ಇ) ಮಾರ್ಚ್ ೧೯೯೬ಕ್ಕೆ ಪೂರ್ಣಗೊಳಿಸಲಾಗುವುದು.

ನಗರಸಭೆ, ಪುರಸಭೆಗಳ ಚುನಾವಣೆ ಕುರಿತು

561 - ಶ್ರೀ ಅರಗ ಜ್ಞಾನೇಂದ್ರ, (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ, ಕಾಡಾ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆ:ನಗರಸಭೆ ಮತ್ತು ನಗರಪಾಲಿಕೆಗಳ ಚುನಾವಣೆಗಳನ್ನು ಸರ್ಕಾರದವರು ಯಾವಾಗ ನಡೆಸಲು ನಿರ್ಧರಿಸಿದ್ದಾರೆ?

ಆ) ಅವಧಿ ಮುಗಿಯುತ್ತಿದ್ದಂತೆ ಚುನಾವಣೆ ನಡೆಸದಿರುವ ಕಾರಣವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ,ಕಾಡಾ, ಕರ್ನಾಟಕ ಹೈದರಾಬಾದ್ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು):

ಅ) ನವೆಂಬರ್ ೧೯೯೫.

ಆ) ಸಂವಿಧಾನದ (೭೪ನೇ ತಿದ್ದುಪಡಿ) ಕಾಯ್ದೆ ೧೯೯೨ರ ಪ್ರಕಾರ, ಮುನ್ಸಿಪಾಲಿಟಿಗಳ ವಿಂಗಡಣೆ, ವಾರ್ಡುಗಳನ್ನು ನಿಗದಿಗೊಳಿಸುವುದು, ಚುನಾವಣಾ ನಿಯಮಗಳನ್ನು ಅಂತಿಮವಾಗಿ ರೂಪಿಸುವುದು, ಈ ಎಲ್ಲಾ ಕೆಲಸಗಳು ಸಂಪೂರ್ಣವಾಗಿರುವುದಿಲ್ಲ.

ಪುರಸಭೆಗಳಿಗೆ ಅಭಿವೃದ್ಧಿ ಅನುದಾನ

565 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಪುರಸಭೆಗಳಿಗೆ ಅಭಿವೃದ್ಧಿ ಅನುಧಾನವನ್ನು ಯಾವ ಆಧಾರದಲ್ಲಿ ನೀಡಲಾಗುವುದು?

ಅ) ಶಿವಮೊಗ್ಗ ನಗರಸಭೆಗೆ ಕಳೆದ ಐದು ವರ್ಷಗಳಲ್ಲಿ ವರ್ಷವೊಂದಕ್ಕೆ ಎಷ್ಟರಂತೆ ಅಭಿವೃದ್ಧಿ ನಿಧಿಯನ್ನು ಕೊಡಲಾಗಿದೆ?

ಇ) ಈ ಇಲ್ಲಿನ ಜನಸಂಖ್ಯೆ ಮತ್ತು ವಿಸ್ತೀರ್ಣದ ದೃಷ್ಟಿಯಿಂದ ಸಮಂಜಸವಾಗಿದೆಯೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು).

ಅ) ಪುರಸಭೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಅಭಾವ ಪರಿಹಾರ, ರಸ್ತೆಗಳ ದುರಸ್ತಿಗಾಗಿ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಆ)		ಲಕ್ಷಗಳಲ್ಲಿ
	90-91	1.00
	91-92	4.00
	92-93	2.00
	93-94	
	94-95	ಇಲ್ಲಾ.

ಇ) ಅಭಿವೃದ್ಧಿ ಅನುದಾನವನ್ನು ವಿಸ್ತೀರ್ಣ ಮತ್ತು ಜನಸಂಖ್ಯಾ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದಿಲ್ಲ. ಕ್ರಮಸಂಖ್ಯೆ ೧ ರಲ್ಲಿ ಉತ್ತರಿಸುವ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

೧೯೯೪-೯೫ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗಾಗಿ ಒದಗಿಸಿರುವ ಅಯವ್ಯಯದ ಮೊತ್ತ.

೫೭೩ - ಶ್ರೀ ಅಯನೂರು ಮಂಜುನಾಥ (ಹೊಸನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೪-೯೫ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳಿಗಾಗಿ ನಿಗದಿಪಡಿಸಿದ್ದ ಒಟ್ಟು ಮೊತ್ತವೆಷ್ಟು.

ಆ) ಸದರಿ ಮೊತ್ತವನ್ನು ಸಂಪೂರ್ಣವಾಗಿ ನಿಗದಿತ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆಯೇ

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ೧೯೯೪-೯೫ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗೆ ಒದಗಿಸಲಾದ ಹಣದ ವಿವರವನ್ನು ಈ ಕೆಳಗೆ ತೋರಿಸಿದೆ:-